emlc/

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:ನಂ-29, ವಿಜಯನಗರ
2ನೇ ಹಂತ, ಹಿನಕಲ್, ಮೈಸೂರು-
5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seeommys@gmail.com


---

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ಸೆ.33 ದಿನಾಂಕ: .06.2017

## ಸಭೆಯ ನಡಾವಳಿಗಳು

ದಿನಾಂಕ 24/05/2017 ರಂದು ಕೊಳ್ಳೇಗಾಲ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

| ಕ್ರಸಂ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಕೆ.ರಾಮಚಂದ್ರ | ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು |
| 2 | ಶ್ರೀಮತಿ.ತಾರಾ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೈಸೂರು |
| 3 | ಶ್ರೀ.ಜಿ.ರಾಮಸ್ವಾಮಿ | ಕಾ.ನಿ.ಇಂ(ವಿ), ಕೊಳ್ಳೇಗಾಲ ವಿಭಾಗ |
| 4 | ಶ್ರೀ.ಟಿ.ವಿಜಯಕುಮಾರ್ | ಲೆಕ್ಕಾಧಿಕಾರಿ, ಕೊಳ್ಳೇಗಾಲ ವಿಭಾಗ |
| 5 | ಶ್ರೀ.ಎಸ್.ಲಿಂಗರಾಜು | ಸ.ಕಾ.ನಿ.ಇಂ(ವಿ),ಕೊಳ್ಳೇಗಾಲ ಉಪವಿಭಾಗ |
| 6 | ಶ್ರೀ.ಎಂ.ಸುಧಾಕರ್ ಕೊಟಗೊಡ | ಸ.ಇಂ(ವಿ), ಕೊಳ್ಳೇಗಾಲ ಉಪವಿಭಾಗ |
| 7 | ಶ್ರೀ.ಜಿ.ವಿ.ಲಕ್ಷ್ಮಿಕಾಂತ್ | ಸ.ಇಂ(ತಾ), ಕೊಳ್ಳೇಗಾಲ ಉಪವಿಭಾಗ |
| 8 | ಶ್ರೀ.ಪಣೇಶ್ ಬಾಬು.ಬಿ | ಕಿ.ಇಂ(ವಿ), ಕೊಳ್ಳೇಗಾಲ ಉಪವಿಭಾಗ |
| 9 | ಶ್ರೀ.ರಂಗೇಗೌಡ | ಕಿ.ಇಂ(ವಿ), ಕೊಳ್ಳೇಗಾಲ ಉಪವಿಭಾಗ |
| 10 | ಶ್ರೀ.ಜಮೀಲ್ ಅಹಮ್ಮದ್ | ಪ್ರಕಿ.ಇಂ(ವಿ), ಕೊಳ್ಳೇಗಾಲ ಉಪವಿಭಾಗ |
| 11 | ಶ್ರೀ.ಆರ್.ರವಿಕುಮಾರ್ | ಪ್ರಕಿ.ಇಂ(ವಿ), ಕೊಳ್ಳೇಗಾಲ ಉಪವಿಭಾಗ |
| 12 | ಶ್ರೀಸಿ.ಕೆ.ಮಹದೇವಸ್ವಾಮಿ | ಪ್ರಭಾರ.ಹಿರಿಯ ಸಹಾಯಕ, ಕೊಳ್ಳೇಗಾಲ ಉಪವಿಭಾಗ |

ಸಭೆಯಲ್ಲಿ ಕೊಳ್ಳೇಗಾಲ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

DGM-RA-1
22/06

AGM-RA4
21/06

ಚಾ.ವಿ.ಸ.ನಿ.ನಿ. ನಿಗಮ ಕಾರ್ಯಾಲಯ
ನಂ. 943
ತಾ. 22/6/17
ವಿಜಯನಗರ, ಮೈಸೂರು

| ಕ್ರಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರುಗಳು | ತೆಗೆದುಕೊಂಡ ಕ್ರಮ |
|---|---|---|---|
| 1 | ರವೀಂದ್ರನಾಥ, ಮಧುವನಹಳ್ಳಿ, | ಐಪಿ ಸೆಟ್ ಗ್ರಾಹಕರಿಗೆ 6 ತಿಂಗಳಿಂದ ಪರಿವರ್ತಕ ಬದಲಾಯಿಸಿರುವುದಿಲ್ಲ ಹಾಗೂ ಬದಲಾವಣೆ ಮಾಡಿದ ತಕ್ಷಣ ವಿಫಲವಾಗುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರುವುದು ರೈತರಿಗೆ ಹಾಗೂ ನಷ್ಟಕ್ಕೆ ಹೊಣೆ ಯಾರು ಗ್ರಾಮೀಣ ಪ್ರದೇಶದಲ್ಲಿ 1ಫೀಡರ್‌ನಲ್ಲಿ ಸಮಸ್ಯೆಯಾದರೆ 6 ಫೀಡರ್‌ಗಳ ಎಲ್.ಸಿ ಪಡೆದಿರುವುದರಿಂದ ಗ್ರಾಹಕರಿಗೆ ನಷ್ಟವಾಗಿರುವುದರ ಬಗ್ಗೆ | ಈಗಾಗಲೇ ಹೆಚ್ಚುವರಿ ಬಾರವಿರುವ ಪರಿವರ್ತಕಗಳಿಗೆ ಇ ಅಂಡ್ ಐ ಮತ್ತು ಯು.ಎನ್.ಐ.ಪಿ ಯೋಜನೆಯಡಿಯಲ್ಲಿ ಪರಿವರ್ತಕಗಳನ್ನು ಅಳವಡಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಲಾಗಿದೆ.<br>ಒಂದು ಫೀಡರ್ ನಲ್ಲಿ ಸಮಸ್ಯೆ ಉಂಟಾದರೆ 6ಫೀಡರ್‌ಗಳ ಎಲ್.ಸಿ ಪಡೆಯಬೇಕಾಗಿರುವ ಕಾರಣ ಅಂತಹ ವಿದ್ಯುತ್ ಮಾರ್ಗಗಳಿಗೆ ಕವರ್ಡ್ ಕಂಡಕ್ಟರ್ ಅಳವಡಿಸಲು ಈಗಾಗಲೇ ನಿಗಮಕ್ಕೆ ಮಾಹಿತಿ ನೀಡಲಾಗಿರುತ್ತದೆ. |
| 2 | ನರಸಿಂಹನ್, ಕೊಳ್ಳೇಗಾಲ ಪಟ್ಟಣ ನಗರ ಸಭೆ, | ಕೊಳ್ಳೇಗಾಲಶಾಖೆ, ದೇವಾಂಗಪೇಟೆಶಾಖೆ ಎರಡು ಶಾಖೆಯನ್ನು ಒಬ್ಬರೇ ನಿರ್ವಹಿಸುತ್ತಿರುತ್ತಾರೆ. 24 ಗಂಟೆ ಸೇವಾ ವಾಹನ ಸೇವೆಯನ್ನು ಸಮುಚಿತ ನೀಡುವ ಬಗ್ಗೆ | ದಿನಾಂಕ: 27.05.2017 ರಂದು ಕೊಳ್ಳೇಗಾಲಶಾಖೆಗೆ ಒಬ್ಬ ಸ.ಇಂ(ವಿ) ರವರನ್ನು ನಿಯೋಜಿಸಲಾಗಿರುತ್ತದೆ. ಮತ್ತು ಸೇವಾ ವಾಹನದ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. |
| 3 | ಸರ್ದಾರ್, ಗುತ್ತಿಗೆದಾರರು, ಕೊಳ್ಳೇಗಾಲ | ಕಂದಾಯ ವಸೂಲಾತಿ 6 ತಿಂಗಳಾದರೂ ವಸೂಲಾತಿಗೆ ಕ್ರಮಕೈಗೊಂಡಿರುವುದಿಲ್ಲ ಎಲ್ಲಾ ಕಡೆ ಪ್ರೈಮರಿ ಜೋತು ಬಿದ್ದಿರುವ ಬಗ್ಗೆ ಕ್ರಮಕೈಗೊಳ್ಳುವುದು. | ಕಂದಾಯ ವಸೂಲಾತಿಯನ್ನು ತೀವ್ರಗೊಳಿಸಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ ಮತ್ತು ಜೋತು ಬಿದ್ದಿರುವ ತಂತಿಗಳನ್ನು ಸರಿಪಡಿಸಲು ಮಧ್ಯಂತರ ಕಂಬ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾದಿಕಾರಿಗಳಿಗೆ ಸೂಚಿಸಲಾಗಿದೆ. |
| 4 | ಇಬ್ರಾಹೀಂ, ಮಧುವನಹಳ್ಳಿ | ತೋಟದ ಮನೆಗಳಿಗೆ ನಿರಂತರ ಜ್ಯೋತಿಯಿಂದ ವಂಚಿತವಾಗಿರುವ ಬಗ್ಗೆ | ಮುಂದಿನ ದಿನಗಳಲ್ಲಿ ನಿಗಮದ ನಿಯಮದಂತೆ ಕ್ರಮವಹಿಸಲು ತಿಳಿಸಲಾಗಿದೆ. |
| 5 | ರವಿಕುಮಾರ್, ಕೊಳ್ಳೇಗಾಲ | ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುವ ಜಾಗದಲ್ಲಿ ಶಾಶ್ವತ ವಿದ್ಯುತ್ ಸಂಪರ್ಕ ನೀಡಿ ನಷ್ಟವಾಗಿರುವ ಬಗ್ಗೆ. | ಸದರಿರವರಿಗೆ ಸಮಜಾಯಿಸಿ ಉತ್ತರ ನೀಡಲಾಗಿದ್ದು, ಸಭೆಯಲ್ಲಿ ಯಾವುದೇ ಅಧಿಕಾರಿಗಳಿಂದ ನಷ್ಟ ಉಂಟಾಗಿರುವುದಿಲ್ಲವಾಗಿ ತಿಳಿಸಲಾಗಿದೆ. |
| 6 | ಚಾಮರಾಜು, ಸಿದ್ದಯ್ಯನಪುರ | *ರೈತರ ಹಿತದೃಷ್ಟಿಯಿಂದ 24*7 ವಾಹನ ಸೇವೆ.<br>*ವಿಫಲವಾಗಿರುವ ಪರಿವರ್ತಕಗಳನ್ನು ಆದಷ್ಟು ಬೇಗನೆ ಬದಲಾಯಿಸುವ ಬಗ್ಗೆ. | * ಗ್ರಾಮೀಣ ಭಾಗದಲ್ಲಿ 24*7 ವಾಹನ ಸೇವೆ ನೀಡಲು ಸಾಧ್ಯವಿರುವುದಿಲ್ಲ.<br>* ನಿಗಮದ ನಿಯಮದಂತೆ ಜೇಷ್ಟತೆಯ ಆಧಾರದ ಮೇಲೆ ಕ್ರಮಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು. |
| 7 | ನಾಗರಾಜು, ಹೊಂಡರಬಾಳು | 1. *ನಗರಕ್ಕೆ 24*7 ನೀಡಿದ್ದೀರಿ, ಆದರೆ ಗ್ರಾಮೀಣ ಭಾಗಕ್ಕೆ 24*7 ವಾಹನ ಸೇವೆ ಇಲ್ಲ.<br>*ಮಾರ್ಗದಾಳು 2 ದಿನ 3 ದಿನ ಆದರೂ ಬರುವುದಿಲ್ಲ ಶಾಖಾವಾರು ದೂರು ದಾಖಲು ಪುಸ್ತಕ ಇಡಿ . | 1. * ಗ್ರಾಮೀಣ ಭಾಗದಲ್ಲಿ 24*7 ವಾಹನ ಸೇವೆ ನೀಡಲು ಸಾಧ್ಯವಿರುವುದಿಲ್ಲ.<br>*ಸದರಿ ಸಮಸ್ಯೆಯನ್ನು ನೀಗಿಸಲು ಈಗಾಗಲೇ ಶಾಖೆಗಳಿಗೆ ಸಿಬ್ಬಂದಿಗಳನ್ನು ಒದಗಿಸಲಾಗಿರುತ್ತದೆ ಮತ್ತು ಶಾಖಾ |

| | | | |
|---|---|---|---|
| | | 2. ಆನ್ ಲೈನ್ ರಿಜಿಸ್ಟರ್‌ನಲ್ಲಿ ತೊಂದರೆಯಾಗುತ್ತಿರುವ ಬಗ್ಗೆ ಎರಡು ತಿಂಗಳು ಆದರೂ ಸಂಪರ್ಕ ನೀಡಲು ತೊಂದರೆಯಾಗಿರುತ್ತದೆ.<br>3. ಇಲಾಖೆಯಲ್ಲಿ ಗ್ರಾಹಕರು ಆನ್ ಲೈನ್ ನಲ್ಲಿ ನೊಂದಾವಣೆ ಮಾಡಲು ಸಾಧ್ಯವೇ ಉಪವಿಭಾಗ ವ್ಯಾಪ್ತಿಯಲ್ಲಿ ಮಾಡುವುದು. | ಕಛೇರಿಯಲ್ಲಿ ದೂರು ದಾಖಲಿಸುವ ವ್ಯವಸ್ಥೆಯನ್ನು ಮಾಡಲು ತಿಳಿಸಲಾಗಿದೆ.<br>2. ಇದಕ್ಕೆ ಈಗಾಗಲೇ ಕ್ರಮ ವಹಿಸಲಾಗಿದೆ.<br>3. ಉಪವಿಭಾಗದ ವ್ಯಾಪ್ತಿಯಲ್ಲೇ ನೊಂದಾವಣಿ ಮಾಡುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 8 | ಸಂತೋಷ್, ಸಿದ್ದಯ್ಯನಪುರ | ಮಳೆ ಬಂದಾಗ ಕಂದಾಯ ಪಾವತಿ ಮಾಡಲು ವಯಸ್ಸಾದವರು ಬರುತ್ತಿರುತ್ತಾರೆ, ಜನಗಳಿಗೆ ನೆರಳಿನ ವ್ಯವಸ್ಥೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಮಾಡಲು ತಿಳಿಸಿರುತ್ತಾರೆ. | ಈಗಾಗಲೇ ಸಂಬಂಧಪಟ್ಟವರಿಗೆ ಕೆಲಸ ಮಾಡಲು ಸೂಚಿಸಲಾಗಿದೆ |
| 9 | ಸೈಯದ್ ಉಲ್ಲಾ, ನೂರ್ ಮೊಹಲ್ಲಾ, ಕೊಳ್ಳೇಗಾಲ | ರಾತ್ರಿ ಸಮಯದಲ್ಲಿ ವಿದ್ಯುತ್ ಹೋದರೆ ಯಾರು ಇರುವುದಿಲ್ಲ. | 24*7 ಸೇವಾ ವಾಹನ ಈಗಾಗಲೇ ಚಾಲ್ತಿಯಲ್ಲಿರುತ್ತದೆ. ಸದರಿ ಪ್ರದೇಶಕ್ಕೆ ಜಿಓಎಸ್ ಇಲ್ಲದಿರುವ ಕಾರಣ ಜಿಓಎಸ್ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲಾಗಿದೆ. |
| 10 | ನಂದ, ಹೊಂಡರಬಾಳು | ಸುಟ್ಟು ಹೋದ ಟಿಸಿಗೆ ಮೂರು ದಿನ ಆದರೂ ಬದಲಾಯಿಸಿರುವುದಿಲ್ಲ ಹೊಂಡರಬಾಳು ಮಧುವನಹಳ್ಳಿಯಲ್ಲಿ ಮಾತ್ರ | ನಿಗಮದ ನಿಯಮದಂತೆ ಜೇಷ್ಠತೆಯ ಆಧಾರದ ಮೇಲೆ ಕ್ರಮವಹಿಸಲು ಸೂಚಿಸಲಾಗಿದೆ. |
| 11 | ಶಿವಮಲ್ಲು, ಕಾಮಗೆರೆ | ಮಾರ್ಗದಾಳು ಮಧ್ಯಾಹ್ನದ ಮೇಲೆ ಸಿಗುವುದಿಲ್ಲ ಕೊಂಗರಹಳ್ಳಿ ಶಾಲೆ ಹತ್ತಿರ ಎಲ್.ಟಿ ಮಾರ್ಗ ಜೋತು ಬಿದಿದ್ದೆ ಮರಗಿಡಗಳನ್ನು ಕತ್ತರಿಸಲು ಜನ ನೇಮಿಸಿ. | ದೊಡ್ಡಿಂದುವಾಡಿ ಶಾಖೆಗೆ ಈಗಾಗಲೇ ಹೆಚ್ಚುವರಿ ಸಿಬ್ಬಂದಿಗಳು ನೇಮಿಸಲಾಗಿದ್ದು, ಸದರಿ ಎಲ್.ಟಿ ಮಾರ್ಗಗಳನ್ನು ಸರಿಪಡಿಸಲು ಸೂಚಿಸಲಾಗಿದೆ. |
| 12 | ಮಲ್ಲೇಶ್, ಮಧುವನಹಳ್ಳಿ | ಸಿನಿಯಾರಿಟಿ ಪ್ರಕಾರ ಟಿಸಿ ನೀಡಿರುವುದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು 32 ಬಾವಿಗಳಿಗೆ 100ಕೆವಿಎ ಪರಿವರ್ತಕವಿದ್ದು, ಹೆಚ್ಚುವರಿಯಾಗಿ 63ಕೆವಿಎ ಟಿಸಿ ಅಳವಡಿಸಲು (ಹೊಂಡರಬಾಳು ರಸ್ತೆ ಟಿಸಿ) ಕೋರಿ | ಸದರಿ ಸಮಸ್ಯೆಯನ್ನು ಈಗಾಗಲೇ ಬಗೆಹರಿಸಲಾಗಿದೆ. |
| 13 | ಶಿವರಾಮು, ಕಾಮಗೆರೆ | ಕಾಮಗೆರೆ ಗ್ರಾಮದಲ್ಲಿ ಕಬ್ಬಿಣದ ಕಂಬ ಬದಲಾಯಿಸಲು ಮತ್ತು ಜೋತು ಬಿದ್ದ ಎಲ್.ಟಿ ವಾಹಕ. | ಅಂದಾಜುಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ |
| 14 | ಮಹಮ್ಮದ್ ತಸ್ಕಿನ್, ಕೊಳ್ಳೇಗಾಲ | ಹೊಂಡರಬಾಳು ಗ್ರಾಮಕ್ಕೆ ಒಬ್ಬರೇ ಮಾರ್ಗದಾಳು ಇರುವುದು. | ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. |

| | | | |
|---|---|---|---|
| 15 | ವೆಂಕಟೇಶ್, ಸೂರಾಪುರ | ಕಬ್ಬಿನ ಗದ್ದೆ ಸುಟ್ಟಿದ್ದು, ಇನ್ನು ಪರಿಹಾರ ದೊರೆತಿರುವುದಿಲ್ಲವಾಗಿ ಕೋರಿರುತ್ತಾರೆ. | ಪರಿಹಾರವನ್ನು ನೀಡಲು ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ |
| 16 | ರೇವಣ್ಣ, ಟಗರಪುರ ಮೋಳೆ | 63ಕೆವಿಎ ಪರಿವರ್ತಕ ಕೇಂದ್ರ ಟಗರಪುರದಲ್ಲಿ ಬಾಗಿರುತ್ತದೆ | ಸಂಬಂಧ ಪಟ್ಟ ಅಧಿಕಾರಿಗೆ ಸರಿಪಡಿಸಲು ಸೂಚಿಸಲಾಗಿದೆ. |

ಸಭೆಯನ್ನು ಉದ್ದೇಶಿಸಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಚಾಮರಾಜನಗರ-ಕೊಡಗು ವೃತ್ತ ರವರು ಈ ಕೆಳಕಂಡಂತೆ ನೆರೆದಿದ್ದ ಗ್ರಾಹಕರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

1. ಸಭೆಯನ್ನು ಕರೆದಿರುವುದೇ ಈ ಸಮಸ್ಯೆಗಳ ಆದ್ಯತೆ ಮೇರೆಗೆ ಪರಿಹರಿಸಲು ಖಂಡಿತವಾಗಿ ಶೇ.100ರಷ್ಟು ಸಮಸ್ಯೆಗಳನ್ನು ಕಾರ್ಯ ರೂಪ ಮಾಡುತ್ತೇವೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ನಡೆಸಲಾಗುತ್ತದೆ. ಪಟ್ಟಣ ಪ್ರದೇಶದಲ್ಲಿ 24 ಗಂಟೆ ಗ್ರಾಮೀಣ ಪ್ರದೇಶದಲ್ಲಿ ಭಾಗಕ್ಕೆ 72 ಗಂಟೆಗಳಲ್ಲಿ ವಿಫಲವಾದ ವಿದ್ಯುತ್ ಪರಿವರ್ತಕಗಳನ್ನು ಬದಲಾಯಿಸಲು ಆದ್ಯತೆ ನೀಡಲಾಗಿದೆ. ಆದ್ದರಿಂದ ಸದರಿ ಗ್ರಾಹಕರ ಅರ್ಜಿಯಂತೆ ನಿಗಧಿತ ಅವಧಿಯಲ್ಲಿ ಪರಿವರ್ತಕವನ್ನು ಬದಲಾಯಿಸುವುದು ಹೆಚ್ಚುವರಿ ಬಾರ ಹೊಂದಿದ್ದರೆ ಯು.ಎನ್.ಐ.ಪಿ ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ಸಲ್ಲಿಸುವುದು ಎಲ್ಲಾ ಶಾಖಾಧಿಕಾರಿಗಳು ಇದರ ಬಗ್ಗೆ ಗಮನ ಹರಿಸುವುದು ಮುಂದೆ ಈ ರೀತಿ ಆಗಬಾರದು ನಮ್ಮಿಂದ ಯಾವುದೇ ರೀತಿಯ ಸಹಾಯ ಪಡೆಯಬಹುದು ಕೊಳ್ಳೇಗಾಲ ವಿಭಾಗದಲ್ಲಿ 250ಕೆವಿಎ ಪರಿವರ್ತಕ ವಿಫಲವಾಗಿದ್ದರಿಂದ ಮೈಸೂರು ಮತ್ತು ಚಾಮರಾಜನಗರದಿಂದ ಎರಡು ಪರಿವರ್ತಕಗಳನ್ನು ಪಡೆದುಕೊಂಡು ವಿಫಲವಾದ 250ಕೆವಿಎ ಟಿಸಿ ಗಳನ್ನು ಬದಲಾಯಿಸಲಾಗಿದೆ ಮತ್ತು 6 ಫೀಡರ್ ಗಳಿಗೆ ಎಲ್.ಸಿ ಪಡೆಯುವುದನ್ನು ತಡೆಗಟ್ಟಲು ಕವರ್ಡ್ ಕಂಡಕ್ಟರ್ ಅಳವಡಿಸಲು ವಿಭಾಗ ಮಟ್ಟದಲ್ಲಿ ಅಂದಾಜು ಪಟ್ಟಿ ಸಲ್ಲಿಸಲಾಗಿರುತ್ತದೆ.
2. ನಮ್ಮಲ್ಲಿ ಎಲ್ಲಾ ರೀತಿಯ ಕಾಮಗಾರಿಗಳು ಟರ್ನ್ ಕೀ ಆಧಾರದ ಮೇಲೆ ನಡೆಯುತ್ತಿರುವುದರಿಂದ ಸಾಮಾಗ್ರಿಗಳ ಖರೀದಿಯಲ್ಲಿ ಸ್ವಲ್ಪ ವಿಳಂಬವಾಗಿದ್ದು, ಪ್ರಸ್ತುತ ಸಾಮಾಗ್ರಿಗಳನ್ನು ಖರೀದಿಸಲು ಇಲಾಖೆಯು ಕ್ರಮಕೈಗೊಂಡಿದೆ.
3. ತೋಟದ ಮನೆಗಳಿಗೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕೊಟ್ಟರೆ, ನೀರಾವರಿ ಪಂಪ್ ಸೆಟ್ ಗೆ ಸಂಪರ್ಕ ಮಾಡಿಕೊಳ್ಳುವ ಸಾಧ್ಯತೆ ಇರುವುದರಿಂದ ನಿಗಮಕ್ಕೆ ತೊಂದರೆ ಉಂಟಾಗುವ ಕಾರಣ ಸದರಿ ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಾಗಿರುವುದಿಲ್ಲ.
4. ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುವುದು ಮನೆ ಕಟ್ಟುವಾಗ ಅಥವಾ ಅಂಗಡಿ ಮಳಿಗೆ ಪ್ರಾರಂಭಿಸುವಾಗ ಮಾತ್ರ ಹಾಗೂ ತಾತ್ಕಾಲಿಕ ವಿದ್ಯುತ್ ಸಂಪರ್ಕ 2 ವರ್ಷಗಳ ವರೆಗೆ ಮಾತ್ರ, ನಂತರ ಹೊಸದಾಗಿ ಸಂಪರ್ಕ ಪಡೆಯುವುದು.

ಈ ಮೇಲ್ಕಂಡ ವಿಷಯಗಳನ್ನು ಜನರೊಂದಿಗೆ ಚರ್ಚಿಸಿ ಸಭೆಯನ್ನು ಸಂಜೆ: 5.00 ಘಂಟೆಗೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಕೊಳ್ಳೇಗಾಲ ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.



